ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 05.09.2023.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಮತ್ತು ಉಳಿದ ವಾದಿಯರು ಸೇರಿ ಈ ಪ್ರಕರಣದ ನಡೆಸುತ್ತಿದ್ದೇವೆ ಎಂದರೆ ಸರಿ. ಈ ಪ್ರಕರಣದಲ್ಲಿ 2 ನೇ ವಾದಿ ಏನು ಸಾಕ್ಷ್ಯ ನುಡಿದಿರುತ್ತಾನೆ ಎಂದು ನನಗೆ ಗೊತ್ತು. ನಾನು ಐಟಿಐ ಶಿಕ್ಷಣ ಪೂರೈಸಿರುತ್ತೇನೆ. 2 ನೇ ವಾದಿ ನೀಡಿದ ಮುಖ್ಯ ವಿಚಾರಣೆಯಲ್ಲಿನ ಅಂಶಗಳನ್ನೇ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಾನು 2 ನೇ ವಾದಿ ನೀಡಿದ ಹೇಳಿಕೆಯಲ್ಲಿಯ ಸಂಗತಿಗಳು ನಿಜವಿರುತ್ತವೆ ಎಂದು ತಿಳಿದುಕೊಂಡೇ ನಾನು ಈ ದಿನ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನನ್ನ ತಂದೆ ಅನಿಲ್‌ಕುಮಾರು ನಮ್ಮ ಕುಟುಂಬದ ಪ್ರಮುಖ ಎಂದರೆ ಸರಿ.

ನಾನು ಮತ್ತು ನನ್ನ ತಂದೆ, ತಾಯಿ, ಅಣ್ಣ-ತಮ್ಮಂದಿರು ಒಂದೇ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ಸುಮಾರು 3-4 ವರ್ಷಗಳಿಂದ ನಮ್ಮ ತಂದೆ ನಮ್ಮ ಜೊತೆಯಲ್ಲಿ ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಈ ದಾವೆ ಮಾಡಿದಾಗಿನಿಂದ ನನ್ನ ತಂದೆ ನಮ್ಮ ಜೊತೆಯಲ್ಲಿ ಇಲ್ಲಾ ಎಂದರೆ ಸರಿ. ನನ್ನ ತಂದೆ ವಿಪರೀತ ಮದ್ಯಪಾನ ಚಟಕ್ಕೆ ಬಲಿಯಾಗಿರುತ್ತಾರೆ ಎಂದು ಹಾಗೂ ದುಷ್ಚಟಗಳನ್ನು ಕಲಿತಿದ್ದಾರೆ ಎಂದು ನಿಂಬರ್ಗಾ ಪೊಲೀಸ್ ಠಾಣೆಯಲ್ಲಿ ದೂರು ಕೊಡಲು ಹೋಗಿದ್ದೇವು ಆದರೆ ಅವರು ತೆಗೆದುಕೊಳ್ಳಲಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರನ್ನು ಈ ದಾವೆ ಮಾಡಿದ ನಂತರ ಕೊಡಲು ಹೋಗಿದ್ದೇವು ಎಂದರೆ ಸರಿ.

ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾವೆಲ್ಲ ಕಲಬುರಗಿಯಲ್ಲಿ ಇರುತ್ತೇವೆ, ನಾನು ಮಾತ್ರ ಬೆಂಗಳೂರಿನಲ್ಲಿ ಇರುತ್ತೇನೆ ಎಂದು ಬರೆದಿರುತ್ತೇವೆ ಎಂದರೆ ಸರಿ. ಸುಮಾರು 6 ವರ್ಷಗಳಿಂದ ಕಲಬುರಗಿಯಲ್ಲಿ ಇರುತ್ತೇವೆ. ನನ್ನ ತಂದೆ ದುಷ್ಚಟಕ್ಕೆ ಬಲಿಯಾಗಿರುತ್ತಾರೆ ಎಂದು ಅವರ ಜೊತೆ ಊರಿನವರು ವ್ಯವಹಾರ ಮಾಡಬಾರದು ಎಂದು ಜಾಹಿರ ನೋಟೀಸ್ ಕೊಟ್ಟಿಲ್ಲಾ, ಆದರೆ ಊರಲ್ಲಿ ಯಾರ-ಯಾರಿಗೆ ಸಾಲ ಕೊಡಬೇಕಾಗಿತ್ತೊ ಅದನ್ನು ಕೊಟ್ಟು ಅವರಿಗೆ ಹೇಳಿರುತ್ತೇವೆ. ನಾವು ಸಾಲ ಪಡೆದುಕೊಂಡವರಿಂದ ಸಾಲ ಮರು ಪಾವತಿಸಿದ ಬಗ್ಗೆ ಯಾವುದೇ ಪಾವತಿ ಮತ್ತು ರಶೀದಿಯನ್ನು ಪಡೆದಿರುವುದಿಲ್ಲ. ನಾವು ಯಾರ-ಯಾರಿಗೆ ಎಷ್ಟು-ಎಷ್ಟು ಸಾಲ ಮರುಪಾವತಿ ಮಾಡಿರುತ್ತೇವೆ ಎಂದು ಹೇಳಲಿಕ್ಕೆ ಆಗುವುದಿಲ್ಲ. ನಮ್ಮ

ತಂದೆ ಸಾಲವನ್ನು ನಾವು ಮರುಪಾವತಿ ಮಾಡಿರುತ್ತೇವೆ ಎಂದು ಸೃಷ್ಠಿ ಮಾಡಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ದಿಃ 19.12.2022 ರಂದು ನಿಪಿ-2 ರಲ್ಲಿ ಹೇಳಿರುವ ಕಂಪನಿಗೆ ಸೇರಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ-5 ರ ಪಾವತಿ ಹೊರತುಪಡಿಸಿ ನಾನು ಬೇರೆ ಕಂಪನಿಯಲ್ಲಿ ಕೆಲಸ ಮಾಡಿಲ್ಲಾ, ಅದರ ದಾಖಲೆಯನ್ನು ಹಾಜರುಪಡಿಸಿಲ್ಲಾ ಎಂದರೆ ಸರಿಯಲ್ಲ. 2017 ರಕ್ಕಿಂತ ಮುಂಚೆ ನನ್ನ ವೇತನ ಎಷ್ಟು ಇತ್ತು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲಾ ಎಂದರೆ ಸರಿ. ನಿಪಿ-5 ರಕ್ಕಿಂತ ಮುಂಚೆ ನಾನು ಯಾವುದೇ ಕಂಪನಿಯಲ್ಲಿ ಕೆಲಸ ಮಾಡಿಲ್ಲಾ ಹಾಗೂ ನನಗೆ ಯಾವುದೇ ವೇತನ ಇರಲಿಲ್ಲ ಎಂದರೆ ಸರಿಯಲ್ಲ.

ನಿಪಿ-5 ರಕ್ಕಿಂತ ಮುಂಚೆ ನಾನು ಮತ್ತು ನನ್ನ ಸಹೋದರರ ಸಂಪೂರ್ಣವಾಗಿ ನಮ್ಮ ತಂದೆಯ ಆಧಾಯದ ಮೇಲೆ ಅವಲಂಭೀತರಾಗಿದ್ದೇವು ಎಂದರೆ ಸರಿಯಲ್ಲ. ನಾನು ಮತ್ತು ಉಳಿದ ನನ್ನ ಸಹೋದರರು 2017 ರಕ್ಕಿಂತ ಮುಂಚೆ ಯಾವುದೇ ಉದ್ಯೋಗದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಒಕ್ಕಲುತನಕ್ಕೆ ಬೇಕಾದ ಯಾವುದೇ ಸಾಧನಗಳು ಇಲ್ಲಾ ಎಂದರೆ ಸರಿ. ಆ ಕಾರಣ ನನ್ನ ತಂದೆ ಬೇರೆಯವರ ಕಡೆಯಿಂದ ದಾವಾ ಸ್ವತ್ತನ್ನು ಸಾಗುವಳಿ ಮಾಡಿಕೊಳ್ಳುತ್ತಿದ್ದರು ಎಂದರೆ ಸರಿ. ನನ್ನ ತಂದೆ ಬೇರೆಯವರಿಂದ ಸಾಗುವಳಿ ಮಾಡಿಸುವ ಕಾಲಕ್ಕೆ ಗೇನಿ ಮೂಲಕ ಮಾಡಿಸುತ್ತಿದ್ದರೋ ಅಥವಾ ಬೇರೆ ಮುಖಾಂತರ ಸಾಗುವಳಿ ಮಾಡಿಸುತ್ತಿದ್ದರೋ ನನಗೆ ಗೊತ್ತಿಲ್ಲಾ.

2017 ರಕ್ಕಿಂತ ಮುಂಚೆ ನನ್ನ ತಂದೆಗೆ ದಾವಾ ಸ್ವತ್ತಿನಿಂದ ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲಾ. ನನ್ನ ತಂದೆಗೆ ದಾವಾ ಸ್ವತ್ತಿನಿಂದ ಬಂದ ಉತ್ಪನ್ನ ಸಾಲುತ್ತಿಲ್ಲವಾಗಿದ್ದರಿಂದ ಬೇರೆಯವರ ಕಡೆಯಿಂದ ಸಾಲ ಪಡೆದು ಅದನ್ನು ತಿರಿಸುವ ಸಲುವಾಗಿ ಬೇರೆ ಮಾರ್ಗ ಸಿಗದೇ ನನ್ನ ತಂದೆ 2 ನೇ ಪ್ರತಿವಾದಿ ಜೊತೆ ದಾವಾ ಸ್ವತ್ತಿನ ವ್ಯವಹಾರ 2013 ರಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2017 ರಲ್ಲಿ ದಾವಾ ಸ್ವತ್ತಿನ ಮಾರುಕಟ್ಟೆ ಬೆಲೆ ಎಷ್ಟು ಇತ್ತು ಎಂದು ದಾಖಲೆ ಕೊಟ್ಟಿಲ್ಲಾ, ಆದರೆ ಸುಮಾರು ರೂ.8-10 ಲಕ್ಷ ಎಕರೆಗೆ ಬೆಲೆ ಬಾಳುತ್ತಿತ್ತು. ದಾವಾ ಸ್ವತ್ತು ರೂ.8-10 ಲಕ್ಷ ಎಕರೆಗೆ ಬೆಲೆ ಬಾಳುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ಏನು ನಿಲುವು ತೆಗೆದುಕೊಂಡಿರುತ್ತಾನೆ ಎಂದು ನಾನು ಓದಿ ತಿಳಿದುಕೊಂಡಿಲ್ಲಾ. 2 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿದ ನಂತರ ಯಾವ ಊರಿನವನು ಎಂದು ವಿಚಾರಣೆ ಮಾಡಿಕೊಂಡಿರುತ್ತೇನೆ. 2 ನೇ ಪ್ರತಿವಾದಿ ಯಾವ ಊರಿನವನು ಎಂದು ತಿಳಿದುಕೊಂಡು ಆತನ ಊರಿಗೆ ಹೋಗಿದ್ದೆ. 2 ನೇ ಪ್ರತಿವಾದಿ ಇದ್ದ ಊರಲ್ಲಿ ನನ್ನ ಚಿಕ್ಕಮ್ಮ ಸಾವಿತ್ರಿ ಗಂಡ ದಾನಗೌಡರು ಇದ್ದರು, ಅವರನ್ನು ಬೇಟಿಯಾಗಿ 2 ನೇ ಪ್ರತಿವಾದಿ ಬಗ್ಗೆ ವಿಚಾರಣೆ ಮಾಡಿರುತ್ತೇನೆ. ನಾನು 2 ನೇ ಪ್ರತಿವಾದಿಯನ್ನು ಈ ದಾವೆ ಮಾಡುವುಕ್ಕಿಂತ ಮುಂಚೆನೆ ಆತನ ಊರಿಗೆ ಬೇಟಿ ಕೊಟ್ಟು ವಿಚಾರಣೆ ಮಾಡಿರುತ್ತೇನೆ. ಸದರಿ ವಿಷಯನ್ನು ದಾವೆಯಲ್ಲಿ ಹೇಳಿಲ್ಲಾ. ನಾನು 2 ನೇ ಪ್ರತಿವಾದಿ ಬಗ್ಗೆ ಯಾವುದೇ ವಿಚಾರಣೆ ಮಾಡದೇ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿ ಟ್ರಾನ್ಸಪೋರ್ಟ್ ವ್ಯಾಪಾರ ಮಾಡುತ್ತಾನೆ ಎಂಬ ಬಗ್ಗೆ ನನಗೆ ಗೊತ್ತಿಲ್ಲಾ. ಆತನ ಹತ್ತಿರ ಎಷ್ಟು ವಾಹನಗಳು ಇರುತ್ತವೆ ಎಂದು ಕೂಡಾ ಗೊತ್ತಿಲ್ಲಾ. 2 ನೇ ಪ್ರತಿವಾದಿಯ ಕುಟುಂಬಕ್ಕೆ ಎಷ್ಟು ಜಮೀನು ಇದೆ ಎಂದು ವಿಚಾರಣೆ ಮಾಡಿಲ್ಲಾ. 2 ನೇ ಪ್ರತಿವಾದಿ ಬಗ್ಗೆ ಯಾವುದೇ ವಿಚಾರಣೆ ಮಾಡದೇ ಆತನಿಗೆ ನಿಪಿ-1 ರ ಹಣ ಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದು ವಾದ ಪತ್ರದಲ್ಲಿ ಸುಳ್ಳು ಹೇಳಿದ್ದೇವೆ ಎಂದರೆ ಸರಿಯಲ್ಲ. ಈ ದಾವೆ ಮಾಡುವ ಮುಂಚೆ ನನ್ನ ಚಿಕ್ಕಮ್ಮನನ್ನು ಕುರಿತು 2 ನೇ ಪ್ರತಿವಾದಿ ಬಗ್ಗೆ ಫೋನ್‌ನಲ್ಲಿ ವಿಚಾರ ಮಾಡಿರುತ್ತೇವೆ, ಆದರೆ ಅವರ ಊರಿಗೆ ಹೋಗಿರುವುದಿಲ್ಲ. ಈ ದಾವೆ ಸಲ್ಲಿಸುವ ಎಷ್ಟು ತಿಂಗಳ ಮೊದಲು ವಿಚಾರಣೆ ಮಾಡಿರುತ್ತೇವೆ ಎಂದು ನನಗೆ ನೆನಪು ಇಲ್ಲಾ.

ಈ ದಾವೆ ಮಾಡುವುಕ್ಕಿಂತ ಮುಂಚೆ ಸುಮಾರು 1 ವರೆ ತಿಂಗಳ ಹಿಂದೆ ನಿಪಿ-1 ರ ವ್ಯವಹಾರ ಆಗಿದ್ದು ನಮಗೆ ಗೊತ್ತಾಗಿರುತ್ತದೆ. ನಾನು ವೈಕ್ತಿಕವಾಗಿ ನನ್ನ ತಂದೆಯನ್ನು ನಿಪಿ-1 ರ ವ್ಯವಹಾರದ ಬಗ್ಗೆ ವಿಚಾರಣೆ ಮಾಡಿರುತ್ತೇನೆ, ಆಗ ನನ್ನ ತಂದೆ ನಿಪಿ-1 ರ ವ್ಯವಹಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲಾ, ನನ್ನನ್ನು ಕೇಳಬೇಡ್ರಿ ಎಂದು ಹೇಳಿ ನನ್ನ ಫೋನ್ ಕಟ್ ಮಾಡಿರುತ್ತಾರೆ. 2 ನೇ ಪ್ರತಿವಾದಿಯನ್ನು ಕುರಿತು ನಿಪಿ-1 ರ ವ್ಯವಹಾರದ ಬಗ್ಗೆ ನಾನು ಕೇಳಿಲ್ಲಾ.

ನನಗೆ ವಾಗೇಶ ಹೀರಮಠ ಕಲಬುರಗಿ ರವರು ಗೊತ್ತಿಲ್ಲಾ. ನಮ್ಮ ಊರಿನ ಅಣ್ಣಾರಾವ್, ಕೇಶವರಾವ್ ಮಾಲಿ ಪಾಟೀಲ್ ರವರು ನನಗೆ ಗೊತ್ತು. ಸದರಿ ಅಣ್ಣಾರಾವ್ ಕುರಿತು ನನ್ನ ತಂದೆ ಸಾಲದ ಬಗ್ಗೆ ವಿಚಾರಣೆ ಮಾಡಿಲ್ಲಾ. 2017 ರಲ್ಲಿ ನಮ್ಮ ತಂದೆಗೆ ತುಂಬಾ

ಸಾಲದ ಅಡೆಚಣೆ ಇತ್ತು ಹಾಗೂ ಜಮೀನಿನಲ್ಲಿ ಸರಿಯಾಗಿ ಬೆಳೆ ಬರುತ್ತಿರಲಿಲ್ಲ ಹಾಗೂ ನನ್ನ ತಂದೆ ಆರ್ಥಿಕ ಪರಿಸ್ಥಿತಿ ಅದೆಗೆಟ್ಟಿತ್ತು ಎಂದರೆ ಸರಿಯಲ್ಲ. 2017 ರಲ್ಲಿ ನನ್ನ ತಂದೆ ಸದರಿ ಅಡೆಚಣೆ ತಿರಿಸುವ ಸಲುವಾಗಿ ದಾವಾ ಜಮೀನುಗಳನ್ನು ಮಾರಾಟ ಮಾಡಲು ಪ್ರಚಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಮ್ಮ ಊರಿಗೆ ಆಗ-ಆಗ ಕೃಷಿ ಬೆಲೆಗಳನ್ನು ತೆಗೆದುಕೊಂಡು ಹೋಗಲು ವಾಹನಗಳನ್ನು ಕಳುಹಿಸುತ್ತಿದ್ದರು, ಆಗ ನನ್ನ ತಂದೆ ಪರಿಚಯವಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ 2 ನೇ ಪ್ರತಿವಾದಿಗೆ ದಾವಾ ಜಮೀನುಗಳನ್ನು ಮಾರಾಟ ಮಾಡುವ ಇಚ್ಛೆ ಇದೆ ಎಂದು ಅಣ್ಣಾರಾವ್ ಮುಖಾಂತರ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ತದನಂತರ ನಮ್ಮ ಮನೆಯಲ್ಲಿಯೇ ನಮ್ಮ ಹಾಗೂ ನಮ್ಮ ತಂದೆ ಸಮಕ್ಷಮ ದಾವಾ ಜಮೀನುಗಳನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಆಗ ನನ್ನ ತಂದೆ ಕುಟುಂಬದ ಅಡೆಚಣೆ ಸಲುವಾಗಿ ದಾವಾ ಜಮೀನುಗಳನ್ನು ಮಾರಾಟ ಮಾಡುವುದು ಇದೆ ಎಂದು 2 ನೇ ಪ್ರತಿವಾದಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ.

ದಿಃ 25.08.2017 ರಂದು ದಾವಾ ಜಮೀನುಗಳನ್ನು ಒಟ್ಟು ರೂ.16,8,000/-ಗಳಿಗೆ ಮಾರಾಟ ಮಾಡುವ ಮಾತುಕತೆಯಾಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಆ ದಿನ ರೂ.8,08,000/- ಗಳನ್ನು ನಗದಾಗಿ ಕೊಡಬೇಕು, ಉಳಿದ ಹಣವನ್ನು ಮೂರು ಕಂತುಗಳಲ್ಲಿ ಕೊಡಬೇಕು ಎಂದು ಮಾತುಕತೆಯಾಗಿತ್ತು ಎಂದರೆ ಸರಿಯಲ್ಲ. ಅದೇ ರೀತಿ ನಮ್ಮ ತಂದೆ-ತಾಯಿಗಳಿಗೆ 2 ನೇ ಪ್ರತಿವಾದಿ ರೂ.8,08,000/- ಹಣವನ್ನು ಕೊಟ್ಟು ರಶೀದಿ ಕೊಡಾ

ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆಗೆ 2 ನೇ ಪ್ರತಿವಾದಿ ಜನವರಿ 2018 ಕ್ಕೆ ರೂ.4,00,000/-, ಮಾರ್ಚ್ 2019 ಕ್ಕೆ ರೂ.2,00,000/- ಹಾಗೂ 2020 ಕ್ಕೆ ರೂ.2,00,000/- ಹಣವನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ.

ದಿಃ 25.08.2017 ರಂದು 2 ನೇ ಪ್ರತಿವಾದಿಗೆ ನಮ್ಮ ತಂದೆ ದಾವಾ ಸ್ವತ್ತಿನ ಸ್ವಾಧಿನವನ್ನು ಕೊಟ್ಟಿರುತ್ತಾರೆ ಎಂರದೆ ಸರಿಯಲ್ಲ. ಅಂದಿನಿಂದ ಇವತ್ತಿನವರೆಗೂ ದಾವಾ ಸ್ವತ್ತಿನಲ್ಲಿ 2 ನೇ ಪ್ರತಿವಾದಿಯೇ ಉಳಿಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ಕೊಟ್ಟ ಎಲ್ಲಾ ದಾಖಲೆಗಳು ಮತ್ತು ರಶೀದಿಗಳನ್ನು ಅಣ್ಣಾರಾವ್ ರವರು ಬರೆದಿದ್ದು, ನಮ್ಮ ತಂದೆ ಅವುಗಳಿಗೆ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರ ದಿನದಂದು ನನ್ನ ತಂದೆ ಉಪನೋಂದಣಿ ಕಛೇರಿಗೆ ಸ್ವ-ಖುಷಿಯಿಂದ ಬಂದು ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರ ದಿನ ನನ್ನ ತಂದೆ 2 ನೇ ಪ್ರತಿವಾದಿಗೆ ಬರೆದುಕೊಟ್ಟ ಪಾವತಿ ಮತ್ತು ರಶೀದಿಗಳನ್ನು ಅದೇ ದಿನ ಹರಿದುಹಾಕಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನನಗೆ ಎಷ್ಟು ಪಾಲು ಬರುತ್ತದೆ ಎಂದು ನನಗೆ ಗೊತ್ತಿಲ್ಲಾ. ನನ್ನ ತಂದೆ ಬರೆದುಕೊಟ್ಟ ನಿಪಿ-1 ನಿಜವಿದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಮಾಡಲು ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**